10. ರಸ್ತೆಯ ಭೂಮಿಯು (Rithg of way) ಸಂಪೂರ್ಣವಾಗಿ ಸರ್ಕಾರದ ಆಸ್ತಿಯಾಗಿದ್ದು ಅದರಲ್ಲಿ ಯಾವುದೇ ಒತ್ತುವರಿಗಳು ಇರಬಾರದು.

11. ರಾಷ್ಟ್ರೀಯ ಹೆದ್ದಾರಿಗೆ ನಿಗದಿಪಡಿಸಿದ ಭೂ ವಿಸ್ತೀರ್ಣ (Rithg of way) (ಅಪೇಕ್ಷಣೀಯವಾಗಿ 45 ಮೀಟರ್, ಕನಿಷ್ಟ 30 ಮೀಟರ್) ಭೂಮಿಯನ್ನು ಭೂಸ್ವಾದೀನಪಡಿಸಿಕೊಳ್ಳಲು ಲಭ್ಯವಿದ್ದು ಒತ್ತುವರಿ ರಹಿತವಾಗಿದ್ದು ಇದನ್ನು ಆರು ತಿಂಗಳುಗಳಲ್ಲಿ ರಾಜ್ಯ ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿಕೊಡಬೇಕು.

ಇ) ಇದನ್ನು ಪರಿಶೀಲಿಸಲಾಗುವುದು

ಈ) ಉದ್ಭವಿಸುವುದಿಲ್ಲ.

ಹಿರೇಕೆರೂರು ತಾ॥ ಮುಜರಾಯಿ ಇಲಾಖೆಯಿಂದ ಮಂಜೂರಾದ ಹಣ

599 (636) ಶ್ರೀ ಬನ್ನಿಕೋಡ್ ಬಿ.ಹೆಚ್. (ಹಿರೇಕೆರೂರು) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿಗೆ ಕಳೆದ ಮೂರು ವರ್ಷದಿಂದ ಮುಜರಾಯಿ ಇಲಾಖೆಯಿಂದ ದೇವಸ್ಥಾನಗಳ ಜೀರ್ಣೋದ್ಧಾರಗಳಿಗೆ ಮಂಜೂರಾದ ಹಣವೆಷ್ಟು; ಹಾಗೂ ದೇವಸ್ಥಾನಗಳು ಯಾವುವು; (ವರ್ಷವಾರು ತಿಳಿಸುವುದು)

ಆ) ಮಂಜೂರಾದ ಹಣದಲ್ಲಿ ಪ್ರತಿ ವರ್ಷ ಬಿಡುಗಡೆಗೊಂಡ ಹಣವೆಷ್ಟು?

ಇ) ಬಿಡುಗಡೆಗೊಂಡ ಹಣವು ಸದುಪಯೋಗವಾದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ;

ಈ) ಯಾವುದಾದರೂ ದೇವಸ್ಥಾನಗಳಲ್ಲಿ ಹಣದ ಅವ್ಯವಹಾರದ ಬಗ್ಗೆ ವರದಿಯಾಗಿದೆಯೇ;

ಉ) ಪ್ರಸ್ತುತ ಸಾಲಿನಲ್ಲಿ ಹಿರೇಕೆರೂರು ತಾಲ್ಲೂಕಿನ ದೇವಸ್ಥಾನಗಳಿಗೆ ಮಂಜೂರು ಮಾಡಿದ ಹಣವೆಷ್ಟು? ಹಾಗೂ ಅವು ಯಾವುವು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) ಹಿರೇಕೆರೂರು ತಾಲ್ಲೂಕಿಗೆ ಕಳೆದ 3ವರ್ಷಗಳಿಂದ ಜೀರ್ಣೋದ್ಧಾರಕ್ಕಾಗಿ ಒಂದು ಸಂಸ್ಥೆಗೆ 10,000-00 ಗಳು ಬಿಡುಗಡೆ ಮಾಡಲಾಗಿದೆ.

ವರ್ಷ	ದೇವಾಲಯದ ಹೆಸರು	ಮೊತ್ತ
1999-2000	-	-
2000-2001	-	-
2001-2002	ಶ್ರೀಕಾಳಿಕಾದೇವಿ ಮತ್ತು ಬ್ರಹ್ಮ ದೇವ ದೇವಾಲಯ ನಾಗವಂದ ಹಿರೇಕೆರೂರು ತಾಲ್ಲೂಕು	10,000-00

ಆ) ಮೇಲೆ ವಿವರಿಸಿರುವಂತೆ

ಇ) ಹಣ ಬಿಡುಗಡೆಯಾಗಿದ್ದು, ಬಳಕೆ ಪತ್ರ ಬಂದಿರುವುದಿಲ್ಲ.

ಈ) ವರದಿಯಾಗಿರುವುದಿಲ್ಲ.

ಉ) ಪ್ರಸ್ತುತ ವರ್ಷದಲ್ಲಿ ಅನುದಾನ ಇನ್ನು ಹಂಚಿಕೆ ಮಾಡಿರುವುದಿಲ್ಲ.